‘ಕಲಾವಿದನ ಕನಸು ಗೊತ್ತಿರುವುದನ್ನು ಎತ್ತಿತೋರುವುದರಲ್ಲಿಲ್ಲ, ರಹಸ್ಯವಾಗುಳಿದುದರ ಅನಾವರಣದಲ್ಲಿದೆ’ ಎನ್ನುವ ಗ್ಲುಕ್ ಸೃಜನಶೀಲ ಬರಹದ ಅಧ್ಯಾಪಕಿ. ಎಷ್ಟೋ ಪ್ರಸಿದ್ಧ ಅಮೆರಿಕೆಯ ಕವಿಗಳಿಗೆ ಬರವಣಿಗೆಯ ತರಬೇತಿ ಕೊಟ್ಟಿರುವ ಗ್ಲುಕ್ ಪ್ರಕಾರ, ಕವಿಯ ಬಾಳು ‘ಸಾಧನೆಯ ಹೆಗ್ಗಳಿಕೆಯಿಂದ’ ತುಂಬಿರುವುದಿಲ್ಲ; ಬದಲಿಗೆ, ಅದೊಂದು ಅಪೂರ್ಣತೆಯ ಅರಿವಿರುವ ‘ಹಂಬಲದ, ಹಸಿವಿನ, ತವಕದ, ತೃಷೆಯ ಬಾಳು’; ಕವಿ ಮೌನದೊಂದಿಗೆ ಸೆಣಸುತ್ತ, ಕಲೆಯಾಗಿಸುವ ಆ ಕೌತುಕದ, ಆ ರಹಸ್ಯದ ಶೋಧದಲ್ಲಿ ಚಡಪಡಿಸುತ್ತ, ಪ್ರಕ್ಷುಬ್ಧ ಸ್ಥಿತಿಯಲ್ಲಿ, ಸಂಕಟದಲ್ಲಿ ಇರುತ್ತಾಳೆ. ಕವನ ಆಗುವ ದಾರಿ ಅಪೂರ್ಣತೆಯದು, ವಿಫಲತೆಯದು; ಏಕಾಗ್ರ ಪ್ರಯತ್ನದ ಕೊನೆಯಲ್ಲಿ ದನಿಯೊಂದು ಹೊಮ್ಮಿದ ಮೇಲೆ, ಕವನ ಬರೆದಾದ ಮೇಲೆ, ಕವಿ ಉಳಿದಿರುವುದಿಲ್ಲ. ಮತ್ತೆ ಕವಿಯಾಗ ಬಯಸುವವಳು ಮಾತ್ರವೇ ಉಳಿದಿರುತ್ತಾಳೆ. ಇದು ಗ್ಲುಕ್ ಅವರು ಬರವಣಿಗೆಯನ್ನು

# ‘ನಿಚ್ಚಳ ಮುಂಜಾನೆ’

ಸುದೀರ್ಘವಾಗಿ ನಿನ್ನ ನೋಡಿದ್ದೇನೆ ನಾನೀಗ,
ನನ್ನಿಚ್ಛೆಯಂತೆ ನಿನ್ನೊಡನೆ ಮಾತಾಡಬಲ್ಲೆ–
ನಿನ್ನ ಆದ್ಯತೆಗಳಿಗೆ ಮಣಿದಿದ್ದೇನೆ, ನಿನಗೇನು ಇಷ್ಟ
ಎಂದು ತಾಳ್ಮೆಯಿಂದ ಗಮನಿಸಿ,
ವಾಹನಗಳ ನಡುವಲ್ಲಿ ಮಾತ್ರ ಮಾತನಾಡಿ
ನಿನ್ನ ಆಯ್ಕೆಯಂತೆ,
ನೆಲದ ಮೇಲೆ ನೀಲಿ ಹೂಗಳ ಪಕಳೆ
ಮುಸ್ಸಂಜೆಯ ಬೆಳಕು–
ನೀನು ಹೆಸರಿಡುವಲ್ಲಿ ತ್ವರೆ ಮಾಡುವ
ಎಲ್ಲ ಸಂಗತಿಗಳಿಗೂ ಉದಾಸೀನ ತೋರುವ
ನನ್ನಂತವಳ ಧ್ವನಿ ನೀನೆಂದೂ
ಒಪ್ಪಿಕೊಳ್ಳುವುದಿಲ್ಲ
ನಿನ್ನ ಬಾಯಿಯ ಸಣ್ಣ ವೃತ್ತದಂತಹ ಅಚ್ಚರಿ–
ಈವರೆಗೂ ನಿನ್ನ ಮಿತಿಗಳನ್ನು ಸಹಿಸಿಕೊಂಡೆ ನಾನು
ನೀನೇ ಅವುಗಳನು ತೊರೆಯುವೆಯೆಂದು ಬಗೆದು
ನಿನ್ನ ಗಮನವನ್ನು ವಸ್ತುಗಳು ಸದಾ ಹಿಡಿದಿಡಲಾರವೆಂದು ಬಗೆದು–
ಮೊಗಸಾಲೆಯ ಕಿಟಕಿಯಲ್ಲಿಯೇ ನೀಲಿ ಹೂವಿನ ವರ್ಣಚಿತ್ರ –
ಪ್ರತಿಮೆಗಳಿಗೆ ನನ್ನನ್ನು ನಾನು ನಿರ್ಬಂಧಿಸಿಕೊಳ್ಳುತ್ತ
ಇರಲಾರೆ ನಾನು
ಯಾಕೆಂದರೆ, ನನ್ನ ಅರ್ಥವನ್ನು ಸುಳ್ಳಾಗಿಸುವುದು
ನಿನ್ನ ಹಕ್ಕೆಂದು ಬಗೆದಿದ್ದೀಯ ನೀನು:
ನಿನಗೆ ಸ್ಪಷ್ಟತೆ ಕಲಿಸಲು
ನಾನೀಗ ತಯಾರಾಗಿದ್ದೇನೆ